# ಕಪ್ಪಾಯಿತೆ ಕಮಲ ನಯನ?

■ ಪವಿತ್ರಾ ಭಟ್



ಕಣ್ಣಿನ ಒಂದೇ ಒಂದು ನೋಟ ಸಾವಿರ ಭಾವನೆಗಳನ್ನು ವ್ಯಕ್ತಪಡಿಸಬಲ್ಲದು. ಹಲವು ಅರ್ಥಗಳನ್ನು ಹೊಮ್ಮಿಸಬಲ್ಲದು. ಮುಖದ ಸೌಂದರ್ಯದ ಪ್ರಮುಖ ಭಾಗವಾಗಿರುವ ಕಣ್ಣು ನಮ್ಮ ವ್ಯಕ್ತಿತ್ವವನ್ನು ಅನಾವರಣ ಮಾಡಬಲ್ಲದು. ಇಂದಿನ ಒತ್ತಡದ ಜೀವನ, ಅಪೌಷ್ಟಿಕತೆ, ಅಸಮರ್ಪಕ ನಿದ್ದೆ ಹೀಗೆ ಅನೇಕ ಕಾರಣಗಳಿಂದ ಕಣ್ಣಿನ ಸುತ್ತ ಕಪ್ಪಾಗಿಬಿಡುತ್ತದೆ. ಇದು ಚೆಂದದ ಮುಖವನ್ನು ಕಳೆಗುಂದಿಸಿಬಿಡುತ್ತದೆ. ಇದಕ್ಕೆ ತಕ್ಷಣದ ಪರಿಹಾರ ಬೇಕು ಎಂದರೆ ಮೇಕಪ್ ಉತ್ತಮ ಆಯ್ಕೆ. ಬಟ್ಟಲು ಕಣ್ಣು, ನೀಲಿ ಕಣ್ಣು, ಕಪ್ಪು ಕಣ್ಣು, ಕೆಂಪು ಕಣ್ಣು, ಕಾಜಗಣ್ಣು... ಹೀಗೆ ಕಣ್ಣುಗಳ ಬಗೆ ಒಂದೆರಡಲ್ಲ. ಆದರೆ ಎಂಥದ್ದೇ ಕಣ್ಣಾದರೂ ಕಣ್ಣ ಕೆಳಗಿನ ಚರ್ಮ ಕಪ್ಪಾಗಿಬಿಟ್ಟರೆ ಕಣ್ಣಿನ ಅಂದವನ್ನು ಹಾಳುಮಾಡಿಬಿಡುತ್ತದೆ. ಆದ್ದರಿಂದಲೇ ಕಾಜಲ್, ಐಲೈನರ್, ಐಲ್ಯಾಶ್ ಹೀಗೆ ಕಣ್ಣಿನ ಅಲಂಕಾರ ಮಾಡುತ್ತೇವೆ. ಕಣ್ಣಿನ ಕೆಳಗೆ ಉಂಟಾಗಿರುವ ಕಪ್ಪನ್ನು ಮೇಕಪ್‌ನಿಂದ ಮರೆಮಾಚಬಹುದು ಎನ್ನುತ್ತಾರೆ ಮೇಕಪ್ ಕಲಾವಿದೆ ಲಾವಣ್ಯ.

### ಹೀಗೆ ಸರಿ ಮಾಡಿ...

ಮೊದಲು ಕರೆಕ್ಟರ್ ಹಚ್ಚುವಾಗ ಚರ್ಮ ಸಾಮಾನ್ಯ ಬಣ್ಣದಲ್ಲಿದ್ದರೆ ಪೀಚ್ ಬಣ್ಣವನ್ನು (ಕಿತ್ತಳೆ ಮತ್ತು ಗುಲಾಬಿ ಬಣ್ಣಗಳ ಮಿಶ್ರಣ) ಹಾಕಬಹುದು. ಢಾಳ ಕೇಸರಿ ಕರೆಕ್ಟರ್‌ಅನ್ನು ಮಧ್ಯಮ ಮತ್ತು ಗಾಢ ಚರ್ಮ ಇದ್ದರೆ ಬಳಸಬಹುದು. ಇದನ್ನು ಚೆನ್ನಾಗಿ ಬ್ಲೆಂಡ್ ಮಾಡಿಕೊಳ್ಳಬೇಕು.

ನಂತರ ಕನ್ಸಿಲರ್ ಆಯ್ಕೆ ಮಾಡುವಾಗ ಚರ್ಮದ ಬಣ್ಣಕ್ಕಿಂತ ಕೊಂಚ ಕಡಿಮೆ ಶೇಡ್ ಇರಬೇಕು. ಕನ್ಸಿಲರ್‌ನ್ನು ನ್ಯೂಟ್ರಲೈಸರ್ ಎಂದು ಕರೆಯುತ್ತಾರೆ. ಅಂದರೆ ಕೇಸರಿ ಬಣ್ಣದ ಕರೆಕ್ಟರ್ ಮೇಲೆ ಕನ್ಸಿಲರ್ ಹಚ್ಚಿ ಮುಖದ ಚರ್ಮದ ಬಣ್ಣಕ್ಕೆ ತಿರುಗುವಂತೆ ಮಾಡುವುದು.

ಕೊನೆಯಲ್ಲಿ ಫೌಂಡೇಶನ್ ಕ್ರೀಮ್ ಲೇಪನ. ಇದು ಚರ್ಮದ ಬಣ್ಣದಲ್ಲೇ ಇರಬೇಕು. ಒಂದು ವೇಳೆ ನಿಮ್ಮ ಚರ್ಮಕ್ಕಿಂತ ಗಾಢ ಬಣ್ಣದ ಫೌಂಡೇಶನ್ ಆಯ್ಕೆ ಮಾಡಿದರೆ ಸರಿಯಾಗಿ ಬ್ಲೆಂಡ್ ಮಾಡುವುದು ಅಗತ್ಯ. ಇಲ್ಲವಾದರೆ ಮೇಕಪ್ ದಪ್ಪ ಸಿಪ್ಪೆಯಂತೆ ಕಾಣುತ್ತದೆ. ಜತೆಗೆ ಹೆಚ್ಚು ಕಾಲ ಮೇಕಪ್ ಕೂಡ ಉಳಿಯುವುದಿಲ್ಲ.



### ಕಪ್ಪು ವರ್ತುಲ...

ಮೇಕಪ್ ಬಣ್ಣಗಳ ಪ್ರಕಾರ ಕಣ್ಣಿನ ಕೆಳಗಿನ ಡಾರ್ಕ್ ಸರ್ಕಲ್ ನೀಲಿ ಬಣ್ಣದಲ್ಲಿರುತ್ತದೆ. ಹೀಗಾಗಿ ಮೊದಲು ಕೇಸರಿ ಬಣ್ಣದ ಕರೆಕ್ಟರ್ ಹಚ್ಚಿಕೊಳ್ಳಬೇಕಾಗುತ್ತದೆ. ಡಾರ್ಕ್ ಸರ್ಕಲ್ ತಿಳಿ ಬಣ್ಣದಲ್ಲಿದ್ದರೆ ಅಷ್ಟೇನೂ ಸಮಸ್ಯೆಯಾಗದು. ಆದರೆ ಕೆಲವರಿಗೆ ಚರ್ಮ ಕಪ್ಪು ಬಣ್ಣಕ್ಕೆ ತಿರುಗಿರುತ್ತದೆ. ಅಂತಹ ಸಂದರ್ಭದಲ್ಲಿ ಗಾಢ ಕೇಸರಿ ಬಣ್ಣದ ಕರೆಕ್ಟರ್ ಹಚ್ಚಿ ಬ್ಲೆಂಡ್ ಮಾಡಬೇಕಾಗುತ್ತದೆ. ಅದರ ಮೇಲೆ ಕನ್ಸಿಲರ್, ಫೌಂಡೇಶನ್ ಕ್ರಿಮ್ ಹಚ್ಚಿ ನಂತರ ಸೆಟ್ ಮಾಡಬೇಕು. ಇದರಲ್ಲಿ ಮುಖ್ಯವಾದ ಸಂಗತಿ ಎಂದರೆ ಚರ್ಮದ ಬಣ್ಣಕ್ಕೆ ತಕ್ಕ ಹಾಗೆ ಈ ಮೂರನ್ನೂ ಆಯ್ಕೆ ಮಾಡಿಕೊಳ್ಳುವುದು.

### ಕಪ್ಪು ನಿವಾರಿಸಿಕೊಳ್ಳಿ...

ಡಾರ್ಕ್ ಸರ್ಕಲ್ ಅಥವಾ ಕಣ್ಣಿನ ಕೆಳಗಿನ ಕಪ್ಪು ವರ್ತುಲಗಳನ್ನು ನೀವೇ ಸರಿಪಡಿಸಿಕೊಳ್ಳಬಹುದು. ಇದರಿಂದ ದುಬಾರಿ ಮೇಕಪ್‌ಗೆ ಮೊರೆಹೋಗುವ ಅಗತ್ಯ ಇರುವುದಿಲ್ಲ. ಅದಕ್ಕಾಗಿ ಎಣ್ಣೆಯ ಮಸಾಜ್ ಉತ್ತಮ. ತೆಂಗಿನೆಣ್ಣೆ, ಹರಳೆಣ್ಣೆ, ಬಾದಾಮಿ ಎಣ್ಣೆ ಅತ್ಯುತ್ತಮ ಆಯ್ಕೆ. ಇದರ ಸಂಯೋಜಕವಾಗಿ ಹಾಲಿದ್ದರೆ ಇನ್ನೂ ಒಳಿತು.

- ಒಂದು ಚಿಕ್ಕ ಬೌಲ್‌ನಲ್ಲಿ ಒಂದು ಚಮಚ ಹರಳೆಣ್ಣೆ ಹಾಗೂ ಒಂದು ಟೀ ಚಮಚ ಹಾಲು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಇದನ್ನು ಕಣ್ಣಿನ ಕೆಳಗೆ ಹಚ್ಚಿಕೊಳ್ಳಿ. ಒಂದು ಗಂಟೆ ಹಾಗೇ ಬಿಡಿ. ನಂತರ ಉಗುರು ಬೆಚ್ಚಗಿನ ನೀರಿನಿಂದ ತೊಳೆದುಕೊಳ್ಳಿ. ದಿನಕ್ಕೊಮ್ಮೆ ಮಾಡಿದರೆ ಬೇಗ ಫಲಿತಾಂಶ ಪಡೆಯಬಹುದು.
- ಒಂದು ಬೌಲ್‌ನಲ್ಲಿ 4 ಹನಿ ಹರಳೆಣ್ಣೆ ಹಾಗೂ 4 ಹನಿ ಬಾದಾಮಿ ಎಣ್ಣೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಕಣ್ಣಿನ ಕೆಳಗೆ ಹಚ್ಚಿಕೊಳ್ಳಿ. ನಿಧಾನಕ್ಕೆ ಮಸಾಜ್ ಮಾಡಿ. ಇಡೀ ರಾತ್ರಿ ಹಾಗೇ ಬಿಡಿ.
- ಹರಳೆಣ್ಣೆ ಹಾಗೂ ತೆಂಗಿನೆಣ್ಣೆಯನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ. ಕಣ್ಣಿನ ಸುತ್ತಲೂ ಕಪ್ಪಾದ ಜಾಗಕ್ಕೆ ಹಚ್ಚಿ. ನಿಧಾನಕ್ಕೆ ಎರಡು ನಿಮಿಷ ಉಜ್ಜಿ. ರಾತ್ರಿ ಹಾಗೇ ಇಡುವುದರಿಂದ ಉತ್ತಮ ಫಲಿತಾಂಶ ಪಡೆಯಬಹುದು. ■